# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 06.06.2018**

## *ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆಯ ಮತ್ತೊಂದು ಘಟಕ ಕಾರ್ಯಕ್ಕೆ ಚಾಲನೆ*

ಪೂಜ್ಯ ಮಹಾಪೌರರು ಹಾಗೂ ಫ್ರಾನ್ಸ್ ದೇಶದ ಭಾರತದ ರಾಯಭಾರಿಯಾದ ಗೌರವಾನ್ವಿತ ಶ್ರೀ ಅಲೆಕ್ಸಾಂಡರ್ ಜಿಗ್ಗರ್ ರವರು ಇಂದು ಘನತ್ಯಾಜ್ಯ ದಿಂದ ವಿದ್ಯುತ್ ಘಟಕ ಸ್ಥಾಪನಾ ಕಾರ್ಯಕ್ಕೆ ಚಾಲನೆ ನೀಡುವ ಬಗ್ಗೆ MOU ಅನ್ನು ಹಸ್ತಾಂತರಿಸಿಕೊಂಡರು.

ತದನಂತರ, ಫ್ರಾನ್ಸ್ ದೇಶವು ನಗರದ ಘನತ್ಯಾಜ್ಯ ದಿಂದ ವಿದ್ಯುತ್ ಘಟಕ ಸ್ಥಾಪನೆ ಕುರಿತಂತೆ ಈಗಾಗಲೇ ಸರ್ಕಾರದ ಅಧಿಕೃತ ಆದೇಶ ಹೊರಡಿಸಿದ್ದು, ಸಂಬಂಧಪಟ್ಟ ಇಲಾಖೆಗಳ ಅನುಮೋದನೆ ಪಡೆದು. ಅದರಂತೆ ನಗರದ ಚಿಕ್ಕನಾಗಮಂಗಲದಲ್ಲಿ ಸದರಿ ಘಟಕ ಇನ್ನು 7 ತಿಂಗಳ ಅವಧಿಯೊಳಗಾಗಿ ಕಾರ್ಯರಂಭ ಮಾಡಲಿದ್ದು, ಇದರ ಬಗ್ಗೆ ಅಪರಾಹ್ನ ಪೂಜ್ಯ ಮಹಾಪೌರರು ಹಾಗೂ ಫ್ರಾನ್ಸ್ ದೇಶದ ಹಿರಿಯ ಅಧಿಕಾರಿಗಳು ಹಾಗೂ ಪ್ರತಿನಿದಿಗಳು ಘಟಕದ ಸಂಪೂರ್ಣ ವಿವಿರದ ಪಿಪಿಟಿಯ ಮುಖಾಂತರ ವೀಕ್ಷಿಸಿ ಘನತ್ಯಾಜ್ಯ ಘಟಕದ ಪುನರಾವರ್ತನೆ ಹಾಗೂ ಮೂಲಸೌಕರ್ಯ, ಘನತ್ಯಾಜ್ಯ ದಿಂದ ವಿದ್ಯುತ್ ಉತ್ಪಾದನೆಯ ಪ್ರಕ್ರಿಯೆ ಬಗ್ಗೆ ಹಾಗೂ ಘಟಕದ ಸಂಪೂರ್ಣ ಮಾಹಿತಿಯ ಬಗ್ಗೆ ಚರ್ಚಿಸಿದರು. ಸದರಿ ಘಟಕದಿಂದ 7kw ವಿದ್ಯುತ್ ಉತ್ಪಾದನೆಯಾಗಲಿದೆ ಎಂದು ಈ ಸಂದರ್ಭದಲ್ಲಿ ತಿಳಿಸಿದರು.(ಈ ಸಂಬಂಧ ಸರ್ಕಾರದ ಆದೇಶ ಹಾಗೂ ಹೆಚ್ಚಿನ ಮಾಹಿತಿಗಳನ್ನು ಲಗತ್ತಿಸಿದೆ)

**ಸದರಿ ಮಾಹಿತಿಯನ್ನು ತಮ್ಮ ಪತ್ರಿಕಾ ಮಾಧ್ಯಮದಲ್ಲಿ ಪ್ರಕಟಿಸುವಂತೆ ಕೋರಿದೆ.**

**ಸಾರ್ವಜನಿಕ ಸಂಪರ್ಕಾಧಿಕಾರಿ**